# 30401 / 40401

**ನಾಲ್ಕನೆಯ ಚತುರ್ಮಾಸ ಬಿ.ಕಾಂ/ಬಿಬಿಎ ಪರೀಕ್ಷೆಗಳು – ಜುಲೈ/ಆಗಸ್ಟ್ 2023**

**ಸ್ಕೀಮ್: ಸಿಬಿಸಿಎಸ್**

010

**ಕನ್ನಡಭಾಷೆ**

**ವಾಣಿಜ್ಯ ಸೌರಭ – ೪**

**ಸಮಯ: 3 ಗಂಟೆ** **ಗರಿಷ್ಠ ಅಂಕ: 80**

**ಕಾವ್ಯ ಭಾಗ (50 ಅಂಕಗಳು)**

**1.ಅ. ಒಂದು ಪದ್ಯದ ಭಾವವನ್ನು ಸಂದರ್ಭಸಹಿತ ವಿವರಿಸಿ.** **1x5=5**

೧. ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲು ಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್

೨. ಆ ರವಮಂ ನಿರ್ಜಿತ ಕಂ
ಠೀರವ ರವಮಂ ನಿರಸ್ತ ಘನ ರವಮಂ ಕೋ
ಪಾರುಣ ನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗ ಪತಾಕಂ

**ಆ. ಒಂದು ವಾಕ್ಯದಲ್ಲಿ ಉತ್ತರಿಸಿ.** **5x1=5**

೧. ರನ್ನನಿಗೆ 'ಕವಿಚಕ್ರವರ್ತಿ' ಬಿರುದು ನೀಡಿದ ದೊರೆ ಯಾರು?
೨. ಪಂಪ ಭಾರತಕ್ಕಿರುವ ಮತ್ತೊಂದು ಹೆಸರೇನು?
೩. ಅಂಗರಾಜ ಯಾರು?
೪. ದುರ್ಯೋಧನನ ಬಾವುಟದ ಚಿಹ್ನೆ ಯಾವುದು?
೫. ಯಶೌಘನ ಮಡದಿಯ ಹೆಸರೇನು?

**2. ನಾಲ್ಕು ವಾಕ್ಯಗಳನ್ನು ಸಂದರ್ಭ ಸಹಿತ ವಿವರಿಸಿ** **4x2½=10**

೧. ನಿನ್ನಂ ಬೆಸಕೆಯೆ ನೀನೆ ನೆಲನಾಳ್ವುದು ಕಂದಾ
೨. ಚಿಃ ಸತ್ತರೇಂ ಪುಟ್ಟರೆ
೩. ಗಿರಿ ಶಿಖರಂ ಬಿರಿವುದು ನೆಲಂ ಮೊಳಗುವುದಂ
೩. ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್
೪. ಕಳಹಂಸೆಗೆ ಗಿಡಿಗನೆರಗಿದಂತಿರೆ ಬಡಿದಂ
೫. ಈ ಕಬ್ಬಿನದ ಆಯುಧಾವೆ ಮೊದಲು ಬೇಕು.

**3.ಅ. ಎರಡು ವಿಷಯಗಳಿಗೆ ಸ್ವಂತ ಅಭಿಪ್ರಾಯವನ್ನು ಬರೆಯಿರಿ.** **2x4=8**

೧. ಮೂಢನಂಬಿಕೆಗಳು
೨. ದೇವರು
೩. ವೈಜ್ಞಾನಿಕ ಮನೋಭಾವ
೪. ಪವಾಡ ಪುರುಷರು

ಪು.ತಿ.ನೋ



MFGC LIBRARY

ಆ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. 4x½=2

ಲಂಬಣ, ಒಡಲು, ಬಾಳ್, ಅರುಣಜಲ, ಸಮರ, ಲಗ, ಪರದೇಶಿ, ಅಬ್ಬೆ

4. **ಒಂದು ಪ್ರಶ್ನೆಗೆ ಉತ್ತರಿಸಿ:** **1x10=10**

೧. ಕವಿರಾಜಮಾರ್ಗಕಾರನು ಕನ್ನಡನಾಡು, ನುಡಿ ಹಾಗೂ ಕನ್ನಡಿಗರ ಬಗೆಗೆ ಹೇಳಿರುವ ಮಾತುಗಳನ್ನು ವಿವೇಚಿಸಿ.

೨. ಅಮೃತಮತಿ ಅಷ್ಟಾವಂಕನಿಗೆ ಒಲಿದ ಕಾರಣವನ್ನು ಕುರಿತು ಬರೆಯಿರಿ.

5. **ಎರಡು ಪ್ರಶ್ನೆಗಳಿಗೆ ಉತ್ತರಿಸಿ:** **2x5=10**

೧. ಪಂಪನ ಪ್ರತಿನಾಯಕ ಕರ್ಣನ ಪಾತ್ರ ವೈಶಿಷ್ಟ್ಯವನ್ನು ವಿವರಿಸಿ.

೨. ರಣರಂಗದಲ್ಲಿ ದುರ್ಯೋಧನನು ಕಾಣದಿದ್ದಾಗ ಭೀಮ ಕೆರಳಿದ ಬಗೆಯನ್ನು ವಿವರಿಸಿ.

೩. ರಾವಣನಿಂದ ಅಪಹರಣಕ್ಕೊಳಗಾದ ಸೀತೆಯ ಪರಿತಾಪವನ್ನು ವಿವರಿಸಿ.

೪. "ಧರೆಗೆ ದೊಡ್ಡೋರು ಮಂಟೇಸ್ವಾಮಿ' ಜನಪದ ಮಹಾಕಾವ್ಯದಲ್ಲಿ ಕಬ್ಬುನದ ಪ್ರಸಂಗವು ಹೇಗೆ ಚಿತ್ರಿತವಾಗಿದೆ? ವಿವರಿಸಿ.

**ಪ್ರಬಂಧ ಮತ್ತು ಭಾಷಾ ಭಾಗ (30 ಅಂಕಗಳು)**

6. **ಒಂದು ಪ್ರಶ್ನೆಗೆ ಉತ್ತರಿಸಿ:** **1x10=10**

೧. 'ನಂಬಿಕೆ ಎಂಬುದು ಎಲ್ಲರ ಜೀವನದಲ್ಲಿ ಹಾಸುಹೊಕ್ಕಾಗಿದೆ' – ಎಂಬುದು "ಹರಕೆಗಳು" ಪ್ರಬಂಧದಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ? ವಿವೇಚಿಸಿ.

೨. ಸುಖ ಎಂದರೇನು? ಸುಖದ ಮೂಲ ಮತ್ತು ಅದಕ್ಕಿರುವ ಅಡ್ಡಿಗಳು ಪ್ರಬಂಧದಲ್ಲಿ ಹೇಗೆ ನಿರೂಪಿತವಾಗಿದೆ? ವಿವರಿಸಿ.

7. **ಒಂದು ಪ್ರಶ್ನೆಗೆ ಉತ್ತರಿಸಿ:** **1x10=10**

೧. ನಿಗೂಢವಾದ ಸಾವಿನ ಚಿತ್ರಣ 'ಸಾವಿನ ಸುತ್ತ' ಪ್ರಬಂಧದಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ? ವಿವೇಚಿಸಿ.

೨. ಗಣಕ ವಿಜ್ಞಾನದಲ್ಲಿ ಕನ್ನಡವನ್ನು ಹೇಗೆ ಬಳಕೆ ಮಾಡಲಾಗುತ್ತದೆ? ವಿವೇಚಿಸಿ.

8. **ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:** **2x5=10**

೧. ನಿರೂಪಣೆ, ಭಾಷಣ, ಕ್ರಿಯಾತ್ಮಕ ಕನ್ನಡ – ಇವುಗಳಲ್ಲಿ ಎರಡನ್ನು ನಿರೂಪಿಸಿ.

೨. ಪತ್ರ ಲೇಖನ, ಪತ್ರದ ವಿಧಗಳನ್ನು ಕುರಿತು ಬರೆಯಿರಿ.

೩. ಗಾದೆ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ.

೪. ಸಂಪಾದಕರಿಗೆ ಪತ್ರ ಎಂದರೇನು? ಮಾದರಿಯೊಂದಿಗೆ ವಿವರಿಸಿ.

** *** **

MFGC LIBRARY